# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಉಪರಾಷ್ಟ್ರಪತಿ ಶ್ರೀ ಎಂ. ವೆಂಕಯ್ಯ ನಾಯ್ಡು ಅವರು ರಾಮಜನ್ಮಭೂಮಿಯ ಭಗವಾನ್ ಶ್ರೀ ರಾಮಲಲ್ಲಾನ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ನ್ಯಾಸದ ಮಹಾಮಂತ್ರಿ ಚಂಪತ್ರಾಯ್ ಜೀ ಅವರು ಹಾಗು ಉಪರಾಷ್ಟ್ರಪತಿಯವರು ನಿರ್ಮಾವಾಗುತ್ತಿರುವ ಕಾಮಗಾರಿಯನ್ನು ವೀಕ್ಷಿಸಿದರು.

ಸಂಪುಟ : 44 ಸಂಚಿಕೆ : 2 ಶುಭಕೃತ್ – ವಸಂತ, ವೈಶಾಖ ಕಲಿಯುಗಾಬ್ದ 5124 01–05–2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ಬದಲಾದ ಜಾಗತಿಕ ವ್ಯವಸ್ಥೆಯಲ್ಲಿ ಭಾರತದ ಪಾತ್ರವೇನು?



ಜಗತ್ತನ್ನು ಸತತವಾಗಿ 2 ವರ್ಷಗಳಿಂದ ಕಾಡುತ್ತಿರುವ ಕೋವಿಡ್ ಮಹಾಮಾರಿ, ಇದು ಹುಟ್ಟುಹಾಕಿದ ಆರ್ಥಿಕ ಸಂಕಷ್ಟ, ಬಲಿಷ್ಟ ಫಾರ್ಮಾ ಕಂಪೆನಿಗಳು ಜಗತ್ತಿನ ಸಾರ್ವಭೌಮ ದೇಶಗಳನ್ನ ನಡೆಸಿಕೊಂಡ ರೀತಿ, ವಿಶ್ವ ಆರೋಗ್ಯ ಸಂಸ್ಥೆ ಚೀನಾದಲ್ಲಿ ನಡೆಸಿದ ತನಿಖೆಯ ರೀತಿ, ಈಗ ರಷ್ಯಾ–ಉಕ್ರೈನ್ ಸಮರ, ಇವೆಲ್ಲವೂ ಇವತ್ತು ಜಗತ್ತಿನ ಶಾಂತಿ ಹಿತ ಕಾಯಲೆಂದೇ ಹುಟ್ಟುಹಾಕಿದ ವಿಶ್ವ ಸಂಸ್ಥೆಯ ಔಚಿತ್ಯವನ್ನು ಅದರ ಅಸ್ತಿತ್ವವನ್ನು ಪ್ರಶ್ನೆ ಮಾಡುತ್ತಿದೆ. 2021ರ ಸಪ್ಟೆಂಬರಿನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದ ಪ್ರಧಾನಿ ಮೋದಿ, “ವಿಶ್ವಸಂಸ್ಥೆ ತನ್ನನ್ನ ತಾನು ಬದಲಾದ ಜಾಗತಿಕ ವ್ಯವಸ್ಥೆಯಡಿಯಲ್ಲಿ ಬದಲಾಯಿಸಿಕೊಳ್ಳದೆ ಹೋದರೆ ಅದು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಲಿದೆ” ಎಂಬ ಎಚ್ಚರಿಕೆಯನ್ನ ಕೊಟ್ಟಿದ್ದರು. ವಿಶ್ವ ಸಂಸ್ಥೆಯ ಇತಿಹಾಸದಲ್ಲಿ ಜಗತ್ತಿನ ಇನ್ಯಾವುದೇ ನಾಯಕ ಅದರ ಅಂಗಳದಲ್ಲಿ ನಿಂತು ಇಂತಹಾ ಮಾತುಗಳನ್ನ ಆಡಿಲ್ಲ. ಮೋದಿಯವರು ಕಳೆದ ವರ್ಷ ಕೊಟ್ಟ ಎಚ್ಚರಿಕೆ ರಷ್ಯಾ–ಉಕ್ರೈನ್ ಯುದ್ಧದ ಈ ಸಂದರ್ಭದಲ್ಲಿ ವಿಶ್ವ ಸಂಸ್ಥೆಯನ್ನು ನೋಡಿದಾಗ ಮೋದಿಯವರ ಮಾತು ನೂರಕ್ಕೆ ನೂರು ಸತ್ಯ ಅನಿಸುತ್ತದೆ. ಕೋವಿಡ್ ಸಮಯದಲ್ಲಿ ವಿಶ್ವ ಸಂಸ್ಥೆ ಚೀನಾ ಮತ್ತು ಯುರೋಪಿನ ಫಾರ್ಮ ಲಾಭಿಯ ಮುಂದೆ ಮಂಡಿಯೂರಿದ್ದರೆ, ರಷ್ಯಾ ಉಕ್ರೈನ್ ಯುದ್ಧದ ಸಮಯದಲ್ಲಿ ಅಮೇರಿಕಾ ಮತ್ತು ಐರೋಪ್ಯ ದೇಶಗಳ ಕೈಗೊಂಬೆಯಂತೆ ವರ್ತಿಸುತ್ತಿದೆ. ಇದಕ್ಕೆ ಕಾರಣ ವಿಶ್ವಸಂಸ್ಥೆ ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿರ್ಮಾಣ ಆಗಿದೆ ಎಂದು ಮೇಲ್ನೋಟಕ್ಕೆ ಅಂದುಕೊಂಡರೂ ಇದರ ಜುಟ್ಟು ಇರುವುದು ಅಮೇರಿಕಾ ರಷ್ಯಾ, ಚೀನಾ, ಫ್ರಾನ್ಸ್ ಮತ್ತು ಬ್ರಿಟನ್ ಕೈಯಲ್ಲಿ. ಅವುಗಳು ಬಹುತೇಕ ತಮ್ಮ ಸ್ವಾರ್ಥ ಸಾಧನೆಗೆಂದೇ ಈ ಸಂಸ್ಥೆಯನ್ನು ವೇದಿಕೆಯನ್ನಾಗಿ ಬಳಸಿಕೊಂಡಿವೆ. ಮತ್ತು ಇವುಗಳು ವಿಶ್ವಸಂಸ್ಥೆಯ ಹೊರಗೆ ಅದಕ್ಕಿಂತಲೂ ಪ್ರಭಾವಿಯಾಗಿ ಕೆಲಸ ಮಾಡುವ NATO, G20, G7 ತರದ ಗುಂಪುಗಳನ್ನ ಹುಟ್ಟು ಹಾಕಿದವು. ಇದರ ಜೊತೆಗೆ ಅಮೇರಿಕ ತನ್ನ ಡಾಲರ್ ಅನ್ನು ವಿಶ್ವದ ಜಾಗತಿಕ ಕರೆನ್ಸಿಯನ್ನಾಗಿಸಿಕೊಂಡಿದೆ. ಮತ್ತು ಅದರ ಮೂಲಕ ಜಗತ್ತಿನ ಆರ್ಥಿಕ ಚಟುವಟಿಕೆಗಳನ್ನ ನಿಯಂತ್ರಿಸುತ್ತಿದೆ. ಹೀಗಾಗಿ ಅಮೇರಿಕಾ ನ್ಯಾಟೋದ ಮುಖಾಂತರ ವಿಶ್ವದ ಬಲಿಷ್ಟ ಸೈನ್ಯ ಶಕ್ತಿಯಾದರೆ ತನ್ನ ಡಾಲರ್ ಮುಖಾಂತರ ವಿಶ್ವದ ದೈತ್ಯ ಆರ್ಥಿಕ ಶಕ್ತಿ ಆಗಿ ಬೆಳಯಿತು.

1945ರಲ್ಲಿ ಎರಡನೇ ವಿಶ್ವ ಯುದ್ದದ ಅಂತ್ಯದೊಂದಿಗೆ ವಿಶ್ವಸಂಸ್ಥೆಯ ಸ್ಥಾಪನೆಯಾಯಿತು. ಮೊದಲಿಗೆ 51 ದೇಶಗಳು ಇದರ ಸಾಮಾನ್ಯ ಸಭೆಯ ಸದಸ್ಯರಾದರು. 2ನೇ ವಿಶ್ವ ಯುದ್ಧದಲ್ಲಿ ಜಯಶಾಲಿಗಳಾದ ರಾಷ್ಟ್ರಗಳು ಅಲ್ಲೂ ಜಗತ್ತಿನ ವಿದ್ಯಮಾನಗಳ ಮೇಲೆ ತಮ್ಮ ಪ್ರಾಬಲ್ಯ ಉಳಿಸಿಕೊಳ್ಳಲು ವಿಶ್ವಸಂಸ್ಥೆಯೊಳಗೆ ಒಂದು ಭದ್ರತಾಮಂಡಲಿಯನ್ನ ರಚಿಸಿಕೊಂಡು ವಿಟೋ ಅಧಿಕಾರವನ್ನು ತಮ್ಮ ಬಳಿಯೇ ಉಳಿಸಿಕೊಂಡವು. ಹೀಗೆ ಪ್ರಜಾಪ್ರಭುತ್ವದ ಹೆಸರಲ್ಲಿ ಅದನ್ನ ವಿಶ್ವದೆಲ್ಲೆಡೆ ಕಾಪಾಡುವ ಮಾತನ್ನಾಡಿದ ದೇಶಗಳೇ ವಿಶ್ವಸಂಸ್ಥೆಯೊಳಗೆ ಜಾಗತಿಕ ದೇಶಗಳು ಬಹುಮತವನ್ನ ನಿರ್ಣಯಗಳಿಗೆ ತಡೆಯೊಡ್ಡುವ ಪರಮಾಧಿಕಾರವನ್ನು ತಮ್ಮೊಳಗೆ ಉಳಿಸಿಕೊಂಡವು. ಈಗ ವಿಶ್ವಸಂಸ್ಥೆಯ ಒಟ್ಟು ಸದಸ್ಯ ರಾಷ್ಟ್ರಗಳ ಸಂಖ್ಯೆ 193 ಆದರೆ ವಿಶ್ವಸಂಸ್ಥೆಯ ನಿರ್ಣಯಗಳ ಮೇಲೆ ವಿಶೇಷಾಧಿಕಾರ ಇರುವ ಭದ್ರತಾ ಮಂಡಲಿಯ ಸದಸ್ಯ ರಾಷ್ಟ್ರಗಳ ಸಂಖ್ಯೆ 15 ಅದರಲ್ಲಿ 5 ದೇಶಗಳು ಮಾತ್ರ ಭದ್ರತಾ ಮಂಡಲಿಯ ಖಾಯಂ ಸದಸ್ಯರು (ಅಮೇರಿಕ, ಚೀನಾ, ಫ್ರಾನ್ಸ್, ರಷ್ಯಾ ಮತ್ತು ಇಂಗ್ಲೆಂಡ್) ಈ 5 ದೇಶಗಳ ಹಿಡಿತದಲ್ಲೇ ಇವತ್ತು ವಿಶ್ವಸಂಸ್ಥೆ ಇರುವುದು. ಇವರು ಹೇಳಿದಂತೆ WHO, WTO, IMF ಅಂತಹಾ ಸಂಸ್ಥೆಗಳು ಕೇಳುವುದು.

ಇಂತಹಾ ಸಂದರ್ಭದಲ್ಲಿ ಭಾರತದ ನಡೆ ಮಾತ್ರ ಇವತ್ತು ಇಡೀ ವಿಶ್ವವೇ ತಿರುಗಿ ನೋಡುವಂತೆ ಆಗಿದೆ. ಕಳೆದ ಒಂದೂವರೆ ತಿಂಗಳಿನಿಂದ ಯುದ್ಧ ಯುರೋಪ್ ಖಂಡದಲ್ಲಿ ಆಗುತ್ತಿದ್ದರೆ ಭಾರತ ಮಾತ್ರ ವಿಶ್ವ ರಾಜಕಾರಣದ ಕೇಂದ್ರ ಬಿಂದುವಾಗಿದೆ. ಕಾರಣ ವಿಶ್ವಸಂಸ್ಥೆಯಲ್ಲಿ ಯಾವುದರ ಪರ ಓಟ್ ಹಾಕದೇ ಇದ್ದರೂ ಎರಡೂ ದೇಶದ ನಾಯಕರು ಭಾರತದ ಪ್ರಧಾನಿಯೊಂದಿಗೆ ಕನಿಷ್ಟ 4 ಸಾರಿ ಮಾತನಾಡಿದ್ದಾರೆ. ಭಾರತ ತನ್ನ ರಾಜ ತಾಂತ್ರಿಕ ಪ್ರಭಾವ ಬಳಸಿ ಉಕ್ರೈನಿನಲ್ಲಿ ಇದ್ದ 18,000 ಮಕ್ಕಳನ್ನ ಭಾರತಕ್ಕೆ ಸುರಕ್ಷಿತವಾಗಿ ಕರೆದು ತಂದಿದೆ ಇಲ್ಲಿ ಭಾರತದ ಜೊತೆಗೆ ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕ ಭೂತಾನ್ ಸೇರಿದಂತೆ ಅಮೆರಿಕಾದ 7 ಮಂದಿ ಮಕ್ಕಳನ್ನೂ ಭಾರತ ರಕ್ಷಣೆ ಮಾಡಿದೆ. ಇದೇ ಕಾರಣಕ್ಕೆ ಜರ್ಮನಿಯ ವಿದೇಶಾಂಗ ಇಲಾಖೆ ಭಾರತದ ರಾಜತಾಂತ್ರಿಕ ಶಕ್ತಿಯ ಬಗಗೆ ಒಂದು ಮಹತ್ತರವಾದ ಹೇಳಿಕೆ ಕೊಟ್ಟಿತು. “ಯುದ್ಧ ಉಕ್ರೈನಿನಲ್ಲಿ ಆಗುತ್ತಿದೆ. ಆದರೆ ಭಾರತದ ವಿದೇಶಾಂಗ ಇಲಾಖೆ ಜಗತ್ತಿನ ಎಲ್ಲಾ ದೇಶಗಳಿಗಿಂತ ಹೆಚ್ಚು ಕ್ರೀಯಾಶೀಲವಾಗಿದೆ” ಎಂದು. ಇದು ಕೇವಲ ಭಾರತ ‘ಆಪರೇಶ್ ಗಂಗಾ’ ಮಾಡಿ 18 ಸಾವಿರ ಮಕ್ಕಳನ್ನ ಭಾರತಕ್ಕೆ ಸುರಕ್ಷಿತವಾಗಿ ಮರಳಿ ಕರೆತಂದಿರವುದಕ್ಕೆ ಹೇಳಿರುವ ಮಾತಲ್ಲ. ಕಳೆದ ಒಂದು ತಿಂಗಳಿನಲ್ಲಿ 29 ದೇಶಗಳ ಪ್ರಮುಖರು ಭಾರತಕ್ಕೆ ಭೇಟಿ ಕೊಟ್ಟಿದ್ದಾರೆ. ಕಾರಣ ರಷ್ಯಾ ಮತ್ತು ಉಕ್ರೈನ್ ಅಧ್ಯಕ್ಷರ ಬಳಿ ಮಾತನಾಡಿದ ಮಾತನಾಡುತ್ತಿರುವ ಜಗತ್ತಿನ ಏಕೈಕ ದೇಶ ಭಾರತ. ಆ ಕಾರಣಕ್ಕೆ ವಿಶ್ವಸಂಸ್ಥೆಯ ಕಾರ್ಯದರ್ಶಿಗಳು ಜಗತ್ತಿನ ಎಲ್ಲಾ ಬಲಿಷ್ಟ ರಾಷ್ಟ್ರಗಳನ್ನ ಬಿಟ್ಟು ಭಾರತದ ಪ್ರಧಾನಿಗೆ ಕರೆ ಮಾಡಿ ಎರಡೂ ದೇಶಗಳ ನಾಯಕರನ್ನು ಯುದ್ದ ಬಿಟ್ಟು ಮಾತನಾಡಲು ಒಪ್ಪಿಸಿ ಎಂದು ಕೇಳಿಕೊಂಡಿದ್ದಾರೆ. ಯುರೋಪ್ ಮತ್ತು ಅಮೇರಿಕಾ ಒಂದು ಕಡೆ ರಷ್ಯಾವನ್ನು ಜಗತಿನ ಖಳ ನಾಯಕ ಎನ್ನುತ್ತಲೇ ಉಕ್ರೈನಿಗೆ ಯುದ್ಧ ಮುಂದುವರಿಸಲು ಒಂದಷ್ಟು ಆಯುಧಗಳನ್ನ ಪೂರೈಸುತ್ತಿದ್ದರೆ, ಇನ್ನೊಂದು ಕಡೆ ಅದೇ ದೇಶಗಳು ಯಾವ ರಷ್ಯಾವನ್ನು ಬಯ್ಯುತ್ತಿದ್ದಾರೋ, ಅದೇ ರಷ್ಯಾದಿಂದ ಯಥೇಚ್ಛವಾಗಿ ತೈಲವನ್ನ ಖರೀದಿ ಮಾಡುತ್ತಿದ್ದಾರೆ. ಇದರ ನಡುವೆ ಭಾರತಕ್ಕೆ ತನ್ನದಲ್ಲದ ಯುದ್ಧದಲ್ಲಿ ಪ್ರಜಾಪ್ರಭುತ್ವದ ಪರ ಇರಬೇಕು, ರಷ್ಯಾದ ತೈಲ ಖರೀದಿ ಮಾಡಬಾರದು ಎಂಬ ಬುದ್ದಿವಾದದ ಮಾತುಗಳು ಬೇರೆ ಹೇಳುತ್ತಾರೆ.

ಇಂತಹಾ ಸನ್ನಿವೇಶದಲ್ಲಿ ಭಾರತ ಮತ್ತು ಅಮೇರಿಕಾದ ನಡುವೆ ಅಮೇರಿಕಾದಲ್ಲಿ ನಡೆದ 2+2 ಮಾತುಕತೆ ಸಮಯದಲ್ಲಿ ಭಾರತದ ವಿದೇಶಾಂಗ ಸಚಿವರು ಕೊಟ್ಟ ಈ ಮೂರು ಉತ್ತರಗಳು ಇವತ್ತಿನ ಭಾರತ ಖಂಡಿತವಾಗಿಯೂ ಬದಲಾಗುತ್ತಿರುವ ಜಾಗತಿಕ ವಿದ್ಯಮಾನಗಳ ನಡುವೆ ವಿಶ್ವದ ಹಿತವನ್ನು ಕಾಪಾಡಲು ಅತ್ಯಂತ ಸಕ್ಷಮವಾಗಿದೆ ಅನ್ನುವ ಅಭಿಪ್ರಾಯ ಮೂಡಿಸಿದೆ. ಸಭೆಯಲ್ಲಿ ಭಾರತದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ. ನಾವು ಇದನ್ನ ಗಮನಿಸುತ್ತಿದ್ದೇವೆ ಎನ್ನುವ ಮೂಲಕ ಭಾರತವನ್ನು ಇಕ್ಕಟ್ಟಿಗೆ ಸಿಲಕಿಸುವ ತಮ್ಮ ಹಳೇ ಚಾಳಿ ಮುಂದುವರಿಸಿದರು ಇದಕ್ಕೆ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಭಾರತವೂ ಅಮೇರಿಕದಲ್ಲಿ ಆಗುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯನ್ನೂ ಗಮನಿಸುತ್ತಿದೆ ಅಂದಾಗ ಅಮೇರಿಕಾಕ್ಕೆ ತನ್ನದೇ ದೇಶದಲ್ಲಿ ಮುಜುಗರ ಆಗಿತ್ತು. ಇನ್ನು ಭಾರತ ರಷ್ಯಾದಿಂದ ತೈಲ ಖರೀದಿ ಮಾಡುತ್ತಿರುವ ಪ್ರಸಂಗವನ್ನು ಪತ್ರಕರ್ತರೊಬ್ಬರು ಕೇಳಿದಾಗ ಯೂರೋಪ್ ಭಾರತಕ್ಕಿಂತ ಹೆಚ್ಚು ತೈಲ ಖರೀದಿ ಮಾಡುತ್ತಿದ್ದು ಈ ಬಗ್ಗೆ ಗಮನ ಹರಿಸಿ ಎಂದು ಎಸ್. ಜೈ ಶಂಕರ್ ನೇರವಾಗಿ ಹೇಳಿದ್ದರು.

ಇನ್ನು ಅಮೇರಿಕಾದ CATSA ಕಾಯಿದೆ ಬಗ್ಗೆ ಪ್ರಸ್ತಾಪಿಸಿದಾಗ ಇದು ಅಮೇರಿಕಾದ ಕಾಯಿದೆ, ಇದು ವಿಶ್ವಸಂಸ್ಥೆಯ ಕಾನೂನು ಅಲ್ಲ ಹಾಗಾಗಿ ನಾವು ಇಂತವುಗಳಿಗೆ ಸೊಪ್ಪು ಹಾಕುವುದಿಲ್ಲ ಅಂದರು. ಇಂತಹಾ ಹೇಳಿಕೆಗಳು ಭಾರತದ ವಿದೇಶಾಂಗ ಸಚಿವರ ಬಾಯಿಂದ ಬರುತ್ತಲೇ ಅಮೇರಿಕಾ ಕೂಡ ತನ್ನ ವರಸೆ ಬದಲಾಯಿಸಿತು. ಹೀಗೆ ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಯಡಿಯಲ್ಲಿ ಪ್ರಧಾನಿ ಮೋದಿ ನೇತೃತ್ವದ ಭಾರತ ತನ್ನನ್ನು ತಾನು ಅತ್ಯಂತ ನಿರ್ಣಾಯಕ ಜಾಗದಲ್ಲಿ ಗುರುತಿಸಿಕೊಂಡಿರುವುದನ್ನೂ ಹಾಗೂ ಜಗತ್ತಿನ ಅನೇಕ ದೇಶಗಳು ಭಾರತವನ್ನ ಭರವಸೆಯ ಕಣ್ಣುಗಳಿಂದ ನೋಡುವಂತಾಗಿದೆ, ವಿಶ್ವಸಂಸ್ಥೆಯಂತಹಾ ಸಂಘಟನೆಗಳ ಭವಿಷ್ಯ ಡೋಲಾಯಮಾನವಾಗಿದೆ ಅನ್ನುವುದನ್ನೂ ಸಾರಿ ಹೇಳುತ್ತಿದೆ.

## ಸಂಸ್ಮರಣೆ

# ಮಧುರಚೆನ್ನ (31ನೇ ಜುಲೈ, 1903 – 15ನೇ ಆಗಸ್ಟ್ 1952)

ಕನ್ನಡ ಸಾಹಿತ್ಯದಲ್ಲಿ ಮಧುರಚೆನ್ನರೆಂದೇ ಪ್ರಖ್ಯಾತರಾಗಿದ್ದ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿಯವರು ಹುಟ್ಟಿದ್ದು ವಿಜಾಪುರ ಜಿಲ್ಲೆಯ ಹಲಸಂಗಿ ಬಳಿಯಿರುವ ಹೀರೆಲೋಣಿಯಲ್ಲಿ. ತಂದೆ ಸಿದ್ಧಲಿಂಗಪ್ಪ ತಾಯಿ ಅಂಬವ್ವ. ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡು ತಾಯಿಯ ಆಸರೆ.

ಕನ್ನಡ ನವೋದಯದ ಪ್ರಾರಂಭಿಕ ಕಾಲದಲ್ಲಿನ ಮಹತ್ವದ ಬರಹಗಾರರಾದ ಮಧುರಚೆನ್ನರು 1903ರ ಜುಲೈ 31ರಂದು ಜನಿಸಿದರು. ಅವರು ಹುಟ್ಟಿದ ಊರು ಹಲಸಂಗಿಯ ನೆರೆ ಊರಾದ ಹಿರೇಲೋಣಿಯಾದರೂ ಅವರು ಬದುಕೆಲ್ಲ ಕಳೆದದ್ದು ಹಲಸಂಗಿಯಲ್ಲಿಯೇ. ಅವರು 1921ರಲ್ಲಿ ಮುಲ್ಕೀ ಪರೀಕ್ಷೆಯಲ್ಲಿ ಜಿಲ್ಲೆಗೇ ಪ್ರಥಮ ಸ್ಥಾನ ಪಡೆದರಾದರೂ ಅವರ ಶಾಲೆಯ ಓದು ಅಲ್ಲಿಗೇ ಮುಕ್ತಾಯಗೊಂಡಿತು. ಅವರ ಸಂಶೋಧನೆ, ಜನಪದ ಸಾಹಿತ್ಯದ ಅಧ್ಯಯನ, ಆಧ್ಯಾತ್ಮಿಕ ಸಾಹಿತ್ಯದ ವ್ಯಾಸಂಗ, ಬಹುಭಾಷೆಗಳ ಅಭ್ಯಾಸ ಮುಂತಾದವುಗಳೆಲ್ಲ ಅವರ ಅನನ್ಯವಾದ ಸಾಹಿತ್ಯೋಪಾಸನೆಯ ಪ್ರತೀಕಗಳಾಗಿವೆ. ಓದಿನ ವಿಪರೀತ ಗೀಳು. ಸ್ವತಂತ್ರವಾಗಿ ಕಲಿತದ್ದು ಇಂಗ್ಲಿಷ್ ಮತ್ತು ಬಂಗಾಳಿ ಭಾಷೆ. ವಚನ ವಾಙ್ಮಯದ ವಿಸ್ತಾರವಾದ ಅಧ್ಯಯನ.

ತಮ್ಮ ವಯಸ್ಸಿನ 14–15ಕ್ಕೇ ಮಧುರಚೆನ್ನರು ಸಾಹಿತ್ಯಸೃಷ್ಟಿಗೆ ತೊಡಗಿದರು. 19–20ನೆಯ ವಯಸ್ಸಿಗೇ ಜಾನಪದ ಕವನಗಳ ಶೋಧನೆ ಹಾಗು ಸಂಕಲನ ಪ್ರಾರಂಭಿಸಿದರು. ಅದೇ ಸಮಯದಲ್ಲಿ ಸುತ್ತಲಿನ ಹಳ್ಳಿಗಳಿಗೆ ಹೋಗಿ ಅಲ್ಲಿಯ ಶಿಲಾಲೇಖಗಳನ್ನು ಅಚ್ಚು ಮಾಡಿಕೊಂಡರು. ಶಾಸನಗಳ ಲಿಪಿ, ಭಾಷೆ ಇವುಗಳ ಪರಿಚಯ ಮಾಡಿಕೊಂಡರು. ತಮ್ಮ 19ನೆಯ ವರ್ಷ, 3 ತಿಂಗಳುಗಳಿಗೆ 'ಬಾದಾಮಿ ಗುಡಿಗಳ ಜೀರ್ಣೋದ್ಧಾರ' ಎನ್ನುವ ವಿಜಯನಗರದ ಶಾಸನವನ್ನು ಪರಾಮರ್ಶಿಸಿ ಪ್ರಕಟಿಸಿದರು. 'ವಿಜಯಪುರದ ಶಾಸನ'ವನ್ನು ಮೊದಲಿಗೆ ಪ್ರಕಟಿಸಿದವರೂ ಇವರೇ. ಈ ಸಮಯದಲ್ಲಿ ಮಧುರಚೆನ್ನರಿಗೆ ಅನೇಕ ಸಂಶೋಧಕರ ನಿಕಟ ಸಂಪರ್ಕ ಒದಗಿತು.

ವಿಜಾಪುರದಲ್ಲಿ ಶ್ರೀ ಕೋಣ್ಣೂರ ಹಣಮಂತರಾಯರ ಸನ್ನಿಧಾನವನ್ನು ಕೆಲಕಾಲ ಪಡೆದ ಮಧುರಚೆನ್ನರು ಕೋಣ್ಣೂರರು ಹೊರಡಿಸುತ್ತಿದ್ದ 'ಕಾವ್ಯಗುಚ್ಛ' ಪತ್ರಿಕೆಗೆ ಪ್ರಾಚೀನ ಕವಿತೆಗಳ ಸರಳಾನುವಾದ ಬರೆದರು. ಈ ಕಾಲದಲ್ಲಿಯೇ ಅವರು ಬೇಂದ್ರೆಯವರನ್ನು ಕಂಡದ್ದು. 'ಜಯಕರ್ನಾಟಕ' ಪತ್ರಿಕೆಯ ಸಂಬಂಧವನ್ನು ಬೆಳೆಸಿಕೊಂಡದ್ದು. ಇಲ್ಲಿಂದ ಪ್ರಾರಂಭವಾದ ಅವರ ಸಾಹಿತ್ಯಕ ಕಾರ್ಯ, ಅವರ ಜೀವನದುದ್ದಕ್ಕೂ ಬೆಳೆಯುತ್ತಾ ಹೋಯಿತು.

ಮಧುರ ಚೆನ್ನರ ಬದುಕಿನ ಇನ್ನೊಂದು ಆಯಾಮವೆಂದರೆ ಅವರ ಆಧ್ಯಾತ್ಮಿಕ ಸಾಧನೆ:

ಹನ್ನೆರಡು ತುಂಬಿಲ್ಲ ಕನ್ನಕ್ಕಿ ನಾನಂದು  
ನನ್ನ ನಲ್ಲನ ಕತೆಗೆ ಮರುಳುಗೊಂಡೆ  
ಇನ್ನೇನು ಹೇಳುವೆನು ಇಂದಿಗಿಪ್ಪತ್ತಾರು  
ಈಸೊಂದು ದಿನಕರಗಿ ಗೊತ್ತುಗೊಂಡೆ

ಎಂದು 'ನನ್ನ ನಲ್ಲ'ದಲ್ಲಿ ಮಧುರಚೆನ್ನರು ತಮ್ಮ ಆತ್ಮಕಥೆಯನ್ನು ಹೇಳಿಕೊಂಡಿದ್ದಾರೆ. ಅವರು ತಮ್ಮ ಹನ್ನೆರಡನೆಯ ವಯಸ್ಸಿನ ಸುಮಾರಿಗೆ ದೇವರನ್ನು ಕಾಣುವ ಹಂಬಲವುಳ್ಳವರಾದರು. ಸುಮಾರು ಹದಿನಾಲ್ಕು ವರ್ಷಗಳ ಸಾಧನೆಯಲ್ಲಿ ಹೋರಾಡಿ ಅವನನ್ನು ಅರಿತುಕೊಂಡರು. ಅನಂತರದಲ್ಲಿಯೂ ತಮ್ಮ ಸಾಧನೆಯನ್ನು ಮುಂದುವರೆಸಿದ ಅವರು ತಮ್ಮ ಧ್ಯೇಯವನ್ನು ಈಡೇರಿಸಿಕೊಂಡರು. ಅವರ ಆಧ್ಯಾತ್ಮಿಕ ಸಾಧನೆಯ ಕಥನ ಅವರ ಗದ್ಯಕೃತಿಗಳಾದ 'ಪೂರ್ವರಂಗ', 'ಕಾಳರಾತ್ರಿ', 'ಬೆಳಗು' ಮತ್ತು 'ಆತ್ಮಸಂಶೋಧನೆ' ಇವುಗಳಲ್ಲಿ ಮನೋಜ್ಞವಾಗಿ ಪ್ರಕಟಗೊಂಡಿದೆ.

ಯಾರ ಕೇಳಿದರಿಲ್ಲ ಯಾರು ಹೇಳಿದರಿಲ್ಲ  
ಯಾರ ಬಳಿಯಲಿ ಅತ್ತುಕರೆದರಿಲ್ಲ  
ಯಾರ ಕಡೆಗೇನುಂಟು ಮೀರಿಮಿಕ್ಕಿದ ಮಾತು  
ಯಾರ ಬಳಿಗು ನೆಲೆಕಾಣಲಿಲ್ಲ!



ವರಕವಿ ದ.ರಾ. ಬೇಂದ್ರೆ ಕೃತಿಯ ಮುನ್ನುಡಿಯಲ್ಲಿ 'ಮಧುರಚೆನ್ನರ ಕೃತಿಯಲ್ಲಿ ವ್ಯಂಜನ ಶಕ್ತಿಯು ವಿಫುಲವಾಗಿದೆ. ಇವರ ಭಾವಾವೇಶವು ರಸಿಕರನ್ನು ಅಂತರ್ಮುಖರನ್ನಾಗಿ ಮಾಡುವುದು. ನನ್ನ ನಲ್ಲ ಕವಿತೆಯಲ್ಲಿ ಇವರ ಅಧ್ಯಾತ್ಮಿಕ ಪುನರ್ಜನ್ಮವಾಗಿದ್ದರೆ, ದೇವತಾಪೃಥವೀ ಕವನವು ಶಿರೋರತ್ನವಾಗಿದೆ. ಕವನದ ಬಂಧ ಒಂದಕ್ಕಿಂತ ಒಂದು ಚೆಂದ ಎಂದು ಶ್ಲಾಘಿಸಿದ್ದಾರೆ. ಮಾತ್ರವಲ್ಲ; 'ತನ್ನ ಮನದ ಮಾತನ್ನು ಇನ್ನೊಂದು ಮನದಲ್ಲಿ ಇಳಿಸುವ ಸೃಷ್ಟಿಕ್ರಮದಲ್ಲಿಯೇ ಮಾತು ಮುತ್ತಿಟ್ಟಂತಾಗುವುದಾದರೂ ಮನಕ್ಕೆ ಮನವು ಕೂಡುವ ಮುನ್ನ ಮುತ್ತೂ ಕೂಡ ಮಾತಿಗೆ ಕೀಳಾಗುವುದು. ಇನ್ನೊಂದು ಮನವನ್ನು ಮುಟ್ಟಬೇಕೆಂಬ ಊರ್ಮಿಯು ಕವಿಯಲ್ಲಿ ಬೇಕು' ಎಂದು ನೇರವಾಗಿ ಮಧುರಚೆನ್ನರ ಕವಿತೆಗಳನ್ನು ವಿಶ್ಲೇಷಿಸಿ, ಇಂತಹ ಗುಣ ಮಧುರಚೆನ್ನರ ಕವಿತೆಗಳಲ್ಲಿದೆ ಎಂದು ಸಂತೋಷಿಸಿದ್ದಾರೆ.

ಮಧುರಚೆನ್ನರು ಭಗವತ್ ಸಾಕ್ಷಾತ್ಕಾರಕ್ಕಾಗಿ ಅನೇಕ ಮಾರ್ಗಗಳಲ್ಲಿ ಪ್ರಯತ್ನಿಸಿದರು. 15–8–1938ರಲ್ಲಿ ಇವರಿಗೆ ಪುದುಚೆರಿಯಲ್ಲಿ ಅರವಿಂದರ ದರ್ಶನವಾಯಿತು. ಆ ಗಳಿಗೆಯಿಂದ ಮಧುರಚೆನ್ನರ ಆತ್ಮಸಂಶೋಧನೆಗೆ ಅರವಿಂದರ ಅನುಭಾವವೇ ದಾರಿದೀಪವಾಯಿತು. 1941ರಲ್ಲಿ ಇವರು ಮತ್ತೊಮ್ಮೆ ಅರವಿಂದರ ದರ್ಶನವನ್ನು ಹಾಗೂ ಮಹತ್ವದ ಅನುಭವವನ್ನು ಪಡೆದರು.

ಬಿಜಾಪುರದಲ್ಲಿ ನಡೆದ 9ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಬೀಸುವ ಕಲ್ಲಿನ ಹಾಡುಗಳು' ಪ್ರಬಂಧ ಮಂಡಿಸಿ ವಿದ್ವತ್ ಜನರಿಂದ ಪ್ರಶಂಸೆ ಗಳಿಸಿದರು. ಹಾಗೆಯೇ ಸೊಲ್ಲಾಪುರದಲ್ಲಿ ನಡೆದ 33ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆಯ ಗೌರವವನ್ನೂ ಪಡೆದರು. ಮಧುರಚೆನ್ನರ ಅನುಭಾವ ಶೋಧದ ಇನ್ನೊಂದು ಆಯಾಮವನ್ನು ಚಿತ್ರಿಸುವ ಕವನ "ದೇವತಾ ಪೃಥ್ವಿ". ಇಲ್ಲಿ ತಾಯಿ ಮಲಗಿದ್ದಾಳೆ. ಅವಳನ್ನು ಎಬ್ಬಿಸುತ್ತಿರುವ ಮಗನಿಗೆ ದೈಹಿಕ ಹಸಿವನ್ನು ನೀಗಿಸುವ ಮೊಲೆಹಾಲು ಬೇಕಿಲ್ಲ; ಮಾನಸಿಕ ಹಸಿವೆಯನ್ನು ನೀಗಿಸುವ ಮನದ್ಹಾಲು ಬೇಕಾಗಿದೆ. ಸ್ವಲ್ಪ ಸಮಯ ಪ್ರಯತ್ನಿಸಿದ ನಂತರ ತಾಯಿ ಮಲಗಿರುವುದು ನಿದ್ದೆಯಿಂದಲೋ ಅಥವಾ ಸಾವಿನಿಂದಲೋ ಎಂಬ ಭಯ? ಸಂದಿಗ್ಧಗಳನ್ನೂ ಅವನು ಎದುರಿಸುತ್ತಾನೆ. ತಾಯಿ ಏಳುತ್ತಾಳೆ ಎಂಬ ಸಮಾಧಾನದಿಂದ ಮಾತ್ರ ಕೊನೆಯಾಗುವ ಕವಿತೆಯಲ್ಲಿ ಭಾರತ ಮಾತೆಯನ್ನು ಎಬ್ಬಿಸುವ ಆಶಯವೂ ಇದೆ.

ಇಹಪರದ ಸಾರ್ಥಕ್ಯ ಗಳಿಸಿ ಮಧುರಚೆನ್ನರು 1952ರ ಆಗಸ್ಟ್ 15ರಂದು ನಿಧನ ಹೊಂದಿದರು.

## ಸ್ವರಾಜ್ಯ? 75 ನನ್ನ ಭಾರತ ಸಮರ್ಥ ಭಾರತ

ಪುಸ್ತಕ ಪರಿಚಯ




ಪುಟಗಳು : 80  
ಪ್ರಕಾಶಕರು : ದಿಶಾ ಭಾರತ್, ಬೆಂಗಳೂರು  
ಸಂಪಾದಕರು : ರಾಜೇಶ್ ಪದ್ಮಾರ್

ಶಾಲಾ ಕಾಳೇಜು ವಿದ್ಯಾರ್ಥಿಗಳಿಗಾಗಿ ಸ್ವಾತಂತ್ರ್ಯ ಪ್ರಾಪ್ತಿಯ ಬಹುಮುಖ್ಯ ಆಯಾಮಗಳನ್ನು ಹಾಗೂ ದೀರ್ಘಕಾಲದ ಸಂಘರ್ಷದ ಪ್ರೇರಣಾದಾಯಿ ಇತಿಹಾಸವನ್ನು ಕುರಿತು ಪ್ರಾಥಮಿಕ ಮಾಹಿತಿಯನ್ನು ನೀಡುವ ಹಾಗೂ ನಮ್ಮ ರಾಷ್ಟ್ರ ಜೀವನದ ಕುರಿತಾದ ಅನೇಕ ವಿಚಾರಗಳನ್ನು ಅತ್ಯಂತ ಸರಳವಾಗಿ ಪರಿಚಯಿಸುವ ಪ್ರಯತ್ನವೇ ಈ ಪುಸ್ತಕ. ಕ್ರಾಂತಿಕಾರಿ ಹೋರಾಟ, ಅಹಿಂಸಾತ್ಮಕ ಹೋರಾಟ ಸಾಹಿತ್ಯಾತ್ಮಕ ಹೋರಾಟ, ಸಾಮಾಜಿಕ ಸುಧಾರಣೆಯ ಹೆಜ್ಜೆಗಳು, ಸಂತರ ಮಾರ್ಗದರ್ಶನ ಹೀಗೆ ಅನೇಕ ಭಾಗಗಳ ಕುರಿತಾಗಿ ಪುಸ್ತಕ ಬೆಳಕು ಚೆಲ್ಲುತ್ತದೆ.

## ಭಾರತ ವಾರ್ಷಿಕ ರೂ.8.5 ಲಕ್ಷ ಕೋಟಿ ಮೌಲ್ಯದ ಹಾಲು ಉತ್ಪಾದಿಸುತ್ತದೆ: ಮೋದಿ

ಭಾರತವು ವಾರ್ಷಿಕವಾಗಿ 8.5 ಲಕ್ಷ ಕೋಟಿ ರೂಪಾಯಿ ಮೌಲ್ಯದ ಹಾಲನ್ನು ಉತ್ಪಾದಿಸುತ್ತದೆ. ಇದು ಗೋಧಿ ಮತ್ತು ಅಕ್ಕಿಯ ವಹಿವಾಟುಗಿಂತ ಹೆಚ್ಚು. ಸಣ್ಣ ರೈತರು ಹೈನುಗಾರಿಕೆ ವಲಯದ ದೊಡ್ಡ ಫಲಾನುಭವಿಗಳು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಂದು ಭಾರತ ವಿಶ್ವದಲ್ಲೇ ಅತಿ ಹೆಚ್ಚು ಹಾಲು ಉತ್ಪಾದಕ ರಾಷ್ಟ್ರವಾಗಿದೆ. ಕೋಟ್ಯಂತರ ರೈತರ ಜೀವನವು ಹಾಲಿನ ಮೇಲೆ ಅವಲಂಬಿತವಾಗಿದೆ, ಭಾರತವು ವಾರ್ಷಿಕವಾಗಿ 8.5 ಲಕ್ಷ ಕೋಟಿ ರೂಪಾಯಿ ಮೌಲ್ಯದ ಹಾಲನ್ನು ಉತ್ಪಾದಿಸುತ್ತದೆ. ಹೆಸರಾಂತ ಅರ್ಥಶಾಸ್ತ್ರಜ್ಞರು ಸೇರಿದಂತೆ ಅನೇಕರು ಗಮನ ಹರಿಸಲು ವಿಫಲವಾದ ವಿಷಯ ಇದು ಎಂದಿದ್ದಾರೆ.

'ಇದಕ್ಕೆ ಜೊತೆಯಾಗಿ ಗೋಧಿ ಮತ್ತು ಅಕ್ಕಿ ವಹಿವಾಟು ಕೂಡ 8.5 ಲಕ್ಷ ಕೋಟಿ ರೂ. ಮತ್ತು ಸಣ್ಣ ರೈತರು ಹೈನುಗಾರಿಕೆ ಕ್ಷೇತ್ರದ ದೊಡ್ಡ ಫಲಾನುಭವಿಗಳು. ಸಣ್ಣ ಜಮೀನು ಹೊಂದಿರುವ ರೈತರ ಯೋಗಕ್ಷೇಮವನ್ನು ಖಾತ್ರಿಪಡಿಸುವ ಮೂಲಕ ಅವರ ಸರ್ಕಾರ ಯಾವಾಗಲೂ ಅವರ ಬಗ್ಗೆ ಕಾಳಜಿ ವಹಿಸುತ್ತದೆ' ಎಂದು ಪ್ರಧಾನಿ ಹೇಳಿದರು.

## ಎಲ್ಲೋ ಕೇಳಿದ ಕಥೆ

ಓರ್ವ ಭಿಕ್ಷುಕನಿದ್ದನು. ದೇವರ ಮೇಲೆ ಶ್ರದ್ಧೆ ಇದ್ದ ಕಾರಣ ಅವನು ದಿನಪೂರ್ತಿ ನಾಮಜಪ ಮಾಡುತ್ತಿದ್ದನು. ಭಗವಂತನು ಅವನ ನಾಮಜಪದಿಂದ ಪ್ರಸನ್ನನಾಗಿ ಒಂದು ದಿನ ಅವನೆದುರು ಪ್ರಕಟವಾದನು. ಭಗವಂತನು 'ನಾನು ನಿನ್ನ ನಾಮಜಪದಿಂದ ಬಹಳ ಪ್ರಸನ್ನನಾಗಿದ್ದೇನೆ, ನಿನಗೆ ಬೇಕಾದದ್ದನ್ನು ಕೇಳು' ಎಂದು ಹೇಳಿದನು. ಆಗ ಭಿಕ್ಷುಕನು ದುರಾಸೆಯಿಂದ ಚಿನ್ನದ ನಾಣ್ಯಗಳನ್ನು ಕೇಳಿದನು. ಭಗವಂತನು 'ಚಿನ್ನದ ನಾಣ್ಯಗಳನ್ನು ಯಾವ ಪಾತ್ರೆಯಲ್ಲಿ ತೆಗೆದುಕೊಳ್ಳುವೆ?' ಎಂದು ಕೇಳಿದಾಗ ಭಿಕ್ಷುಕನು ತನ್ನ ಅಂಗಿಯನ್ನು ಮುಂದೆಮಾಡಿದನು.

ಭಗವಂತನು ಚಿನ್ನದ ನಾಣ್ಯಗಳನ್ನು ಕೊಡುವ ಮೊದಲು 'ಎಲ್ಲಿಯವರೆಗೆ ನೀನು ಚಿನ್ನದ ನಾಣ್ಯಗಳನ್ನು ಕೇಳುವುದು ಬಿಡುವುದಿಲ್ಲ ಅಲ್ಲಿಯವರೆಗೆ ನಾನು ನಿನ್ನ ಅಂಗಿಯಲ್ಲಿ ಚಿನ್ನದ ನಾಣ್ಯಗಳನ್ನು ಹಾಕುತ್ತಲೇ ಇರುವೆನು. ಆದರೆ ಭೂಮಿಯ ಮೇಲೆ ಚಿನ್ನದ ನಾಣ್ಯಗಳು ಬೀಳಬಾರದು. ನೆಲದ ಮೇಲೆ ಬಿದ್ದರೆ ಈ ನಾಣ್ಯಗಳು ಮಣ್ಣಾಗುವವು' ಎಂದು ಹೇಳಿದನು. ಭಿಕ್ಷುಕನು ಒಪ್ಪಿಕೊಂಡ. ಭಗವಂತನು ಭಿಕ್ಷುಕನ ಅಂಗಿಯಲ್ಲಿ ಚಿನ್ನದ ನಾಣ್ಯಗಳನ್ನು ಹಾಕತೊಡಗಿದ. ಅಂಗಿಯು ತುಂಬುತ್ತ ಹೋಯಿತು ಹಾಗೂ ಭಿಕ್ಷುಕನ ದುರಾಸೆಯು ಹೆಚ್ಚುತ್ತ ಹೋಯಿತು. ಅವನು 'ಸಾಕು' ಎಂದು ಹೇಳಲಿಲ್ಲ, ದೇವರು ಕೊಡುವುದನ್ನು ನಿಲ್ಲಿಸಲಿಲ್ಲ. ಕೊನೆಯಲ್ಲಿ ಚಿನ್ನದ ನಾಣ್ಯಗಳ ಭಾರವನ್ನು ಆ ಅಂಗಿಯು ತಡೆದುಕೊಳ್ಳಲಿಲ್ಲ, ಅಂಗಿಯು ಹರಿದು ಹೋಯಿತು. ಇದರಿಂದ ಎಲ್ಲ ನಾಣ್ಯಗಳು ನೆಲದ ಮೇಲೆ ಬಿದ್ದು ಮಣ್ಣಾದವು.

ಮನಸ್ಸಿನಲ್ಲಿ ದುರಾಸೆ ಇರುವುದರಿಂದ ಇಷ್ಟೊಂದು ನಾಣ್ಯಗಳು ದೊರೆತರೂ ಭಿಕ್ಷುಕನು ಬಡವನಾಗಿಯೇ ಉಳಿದನು.

ಈ ಕಥೆಯಿಂದ ಭಿಕ್ಷುಕನು ಎಲ್ಲಿ ತಪ್ಪಿದನು ಎಂಬುದು ತಮ್ಮ ಗಮನಕ್ಕೆ ಬಂದಿರಬಹುದು. ಅವನು ದುರಾಸೆ ಬಿಟ್ಟು, ಅವನ ಜೀವನಕ್ಕೆ ಬೇಕಾಗುವಷ್ಟು ನಾಣ್ಯಗಳಲ್ಲಿ ಸಂತುಷ್ಟನಾಗಿದ್ದರೆ ಅವನಿಗೆ ಅಷ್ಟೂ ಚಿನ್ನದ ನಾಣ್ಯಗಳು ದೊರೆಯುತ್ತಿದ್ದವು. ಭಗವಂತನು ನೀಡಿದ್ದರಲ್ಲಿ ಸಂತೋಷದಿಂದ ಇರಬೇಕು. ದುರಾಸೆಯು ಬಹಳ ಕೆಟ್ಟದ್ದಾಗಿದೆ. ದುರಾಸೆಯಿಂದ ನಮಗೆ ಏನೂ ದೊರೆಯುವುದಿಲ್ಲ. ತಮಗೆ ಯಾವಾಗಲೂ ಆನಂದದಿಂದ ಇರಬೇಕಿದ್ದರೆ ಸಿಕ್ಕಿರುವುದರಲ್ಲಿ ಸಂತೋಷದಿಂದ ಇರಲು ಕಲಿಯಬೇಕಿದೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್



### ಶ್ರೀಲಂಕಾಗೆ ಆರ್ಥಿಕ ನೆರವು ನೀಡುವಂತೆ ಐಎಂಎಫ್‌ಗೆ ಭಾರತ ಮನವಿ

ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಶ್ರೀಲಂಕಾಗೆ ಆರ್ಥಿಕ ನೆರವು ನೀಡುವಂತೆ ಭಾರತವು ಇಂದು ಅಂತಾರಾಷ್ಟ್ರೀಯ ಹಣಕಾಸು ನಿಧಿಯನ್ನು (IMF) ಕೇಳಿಕೊಂಡಿದೆ. ಯುನೈಟೆಡ್ ಸ್ಟೇಟ್ಸ್‌ನ ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಅಂತರರಾಷ್ಟ್ರೀಯ ಹಣಕಾಸು ನಿಧಿ–ವಿಶ್ವ ಬ್ಯಾಂಕ್ (ಐಎಂಎಫ್–ಡಬ್ಲ್ಯೂಬಿ) ಸ್ಪ್ರಿಂಗ್ ಮೀಟಿಂಗ್‌ಳ ಹಿನ್ನೆಲೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಐಎಂಎಫ್ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲಿನಾ ಜಾರ್ಜಿವಾ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು.

ಐಎಂಎಫ್ ವಿಶೇಷವಾಗಿ ಭಾರತವು ಶ್ರೀಲಂಕಾಕ್ಕೆ ಕಠಿಣ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ನೀಡುತ್ತಿರುವ ಸಹಾಯವನ್ನು ಉಲ್ಲೇಖಿಸಿದೆ" ಎಂದು ಹಣಕಾಸು ಸಚಿವಾಲಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಶ್ರೀಲಂಕಾಕ್ಕೆ ಐಎಂಎಫ್ ಬೆಂಬಲ ಮತ್ತು ತುರ್ತಾಗಿ ಹಣಕಾಸಿನ ನೆರವು ನೀಡಬೇಕು ಎಂದು ಸೀತಾರಾಮನ್ ಸೂಚಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಬಾಂಗ್ಲಾದ 63 ಹಿಂದೂ ನಿರಾಶ್ರಿತ ಕುಟುಂಬಗಳಿಗೆ ಯುಪಿಯಲ್ಲಿ ಭೂಮಿ ವಿತರಣೆ

ಬಾಂಗ್ಲಾದೇಶ ಮತ್ತು ಪಾಕಿಸ್ಥಾನದಿಂದ ಹೊರಹಾಕಲ್ಪಟ್ಟ ಹಿಂದೂ ನಿರಾಶ್ರಿತರ ಕುಟುಂಬಗಳಿಗೆ ಸಹಾಯ ಮಾಡುವ ತನ್ನ ಹಿಂದಿನ ಭರವಸೆಯನ್ನು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಈಡೇರಿಸಿದ್ದಾರೆ. ಬಾಂಗ್ಲಾದ ಹಿಂದೂ ನಿರಾಶ್ರಿತರಿಗೆ ತನ್ನ ರಾಜ್ಯದಲ್ಲಿ ಆಶ್ರಯ ಒದಗಿಸಿದ್ದಾರೆ.




ವರದಿಗಳ ಪ್ರಕಾರ, ಬಾಂಗ್ಲಾದೇಶದಿಂದ ಬಂದ 63 ನಿರಾಶ್ರಿತ ಕುಟುಂಬಗಳಿಗೆ ರಾಜ್ಯದ ರಾಜಧಾನಿ ಲಕ್ನೋದಲ್ಲಿ ಪುನರ್ವಸತಿ ಕಲ್ಪಿಸಲು 'ಮುಖ್ಯಮಂತ್ರಿ ಆವಾಸ್ ಯೋಜನೆ' ಅಡಿಯಲ್ಲಿ ಅಧಿಕೃತ ದಾಖಲೆಗಳೊಂದಿಗೆ ಕೃಷಿ ಮತ್ತು ವಸತಿ ಭೂಮಿಯನ್ನು ವಿತರಿಸಿದರು. ಪಾಕಿಸ್ತಾನ ಮತ್ತು ಬಾಂಗ್ಲಾದೇಶದಿಂದ ಹೊರಹಾಕಲ್ಪಟ್ಟ ಹಿಂದೂಗಳಿಗೆ ಉತ್ತರ ಪ್ರದೇಶದಲ್ಲಿ ವಸತಿ ಮತ್ತು ಕೃಷಿ ಭೂಮಿ ನೀಡುವ ಮೂಲಕ ಅವರಿಗೆ ಆಶ್ರಯ ಕಲ್ಪಿಸುವುದಾಗಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಈ ಹಿಂದೆ ಭರವಸೆ ನೀಡಿದ್ದರು.

ಅತಿಕ್ರಮಣದಾರರಿಂದ ಮುಕ್ತವಾಗಿರುವ ಎಲ್ಲಾ ಭೂಮಿಯನ್ನು ಭೂ ಬ್ಯಾಂಕ್ ವ್ಯಾಪ್ತಿಗೆ ತರಲಾಗುವುದು ಮತ್ತು ಈ ಭೂಮಿಯನ್ನು ಶಾಲೆಗಳು, ಕೈಗಾರಿಕೆಗಳು ಮತ್ತು ಇತರ ವ್ಯವಹಾರಗಳನ್ನು ಸ್ಥಾಪಿಸಲು ಮತ್ತು ಪಾಕಿಸ್ಥಾನ, ಬಾಂಗ್ಲಾ ದೇಶಗಳ ಹಿಂದೂ ನಿರಾಶ್ರಿತರ ಪುನರ್ವಸತಿಗಾಗಿ ಬಳಸಲಾಗುವುದು ಎಂದು ಸಿಎಂ ಯೋಗಿ ಹೇಳಿದ್ದರು.

### ಯಾರೂ ಕಾನೂನು ಕೈಗೆ ತೆಗೆದುಕೊಳ್ಳುವ ಸಾಹಸ ಮಾಡಬೇಡಿ – ಬೊಮ್ಮಾಯಿ.

ಯಾರೂ ಕಾನೂನು ಕೈಗೆ ತೆಗೆದುಕೊಳ್ಳುವ ಸಾಹಸ ಮಾಡಬೇಡಿ. ಕರ್ನಾಟಕ ರಾಜ್ಯ ಇದನ್ನು ಸಹಿಸುವುದಿಲ್ಲ. ಕಾನೂನು ತನ್ನ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಎಲ್ಲಾ ಸಂಘಟನೆಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದರು.

## ಸಾಲುದ್ದದ ಸುದ್ದಿಗಳು



ಹುಬ್ಬಳ್ಳಿಯಲ್ಲಿ ವಿವಾದಾತ್ಮಕ ಪೋಸ್ಟ್‌ಗೆ ಸಂಬಂಧಿಸಿದಂತೆ ನಡೆದಿರುವ ಗಲಾಟೆ ಕುರಿತು ಅವರು ಇಂದು ಪ್ರತಿಕ್ರಿಯೆ ನೀಡಿದರು. ಈಗಾಗಲೇ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಾರೆ. ಯಾರೇ ಕಾನೂನನ್ನು ಕೈಗೆ ತೆಗೆದುಕೊಂಡರೂ ಕಠಿಣ ಕ್ರಮ ತೆಗೆದುಕೊಳ್ಳಲು ಪೊಲೀಸರು ಹಿಂದೆ ಮುಂದೆ ನೋಡುವುದಿಲ್ಲ. ಇದಕ್ಕೆ ಪ್ರಚೋದನೆ ನೀಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೆ ರಾಜಕೀಯ ಬಣ್ಣ ನೀಡುವುದು ಬೇಡ. ಈ ಘಟನೆಯನ್ನು ಕಾನೂನಾತ್ಮಕ ಘಟನೆ ಎಂತಲೇ ಕಾಣಬೇಕು. ಅಂದಾಗ ಮಾತ್ರ ಇಂಥವು ನಿಲ್ಲುತ್ತದೆ ಎಂದರು.

### ಸಾಪ್ತಾಹಿಕ ಕೋವಿಡ್ ಪಾಸಿಟಿವ್ ದರವು ಶೇಕಡಾ 1ಕ್ಕಿಂತ ಕಡಿಮೆ

ದೇಶಾದ್ಯಂತ ಕೋವಿಡ್–19 ಪ್ರಕರಣಗಳಲ್ಲಿ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಹರಿಯಾಣ, ಉತ್ತರ ಪ್ರದೇಶ, ದೆಹಲಿ, ಮಹಾರಾಷ್ಟ್ರ ಮತ್ತು ಮಿಜೋರಾಂ ಸರ್ಕಾರಗಳಿಗೆ ಮಂಗಳವಾರ ಪತ್ರ ಬರೆದಿದ್ದು, ಹೆಚ್ಚುತ್ತಿರುವ ಪಾಸಿಟಿವ್ ಪ್ರಕರಣಗಳ ಕುರಿತು ಮೇಲ್ವಿಚಾರಣೆಯನ್ನು ಮುಂದುವರಿಸುವಂತೆ ಸೂಚಿಸಿದ್ದಾರೆ.

ಸಚಿವಾಲಯವು ತನ್ನ ಅಧಿಕೃತ ಬಿಡುಗಡೆಯಲ್ಲಿ, "ಕಳೆದ 2 ತಿಂಗಳುಗಳಲ್ಲಿ ಭಾರತವು ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ನಿರಂತರ ಮತ್ತು ಗಮನಾರ್ಹ ಕುಸಿತವನ್ನು ಕಂಡಿದೆ, ಕಳೆದ ಕೆಲವು ವಾರಗಳಿಂದ ದೇಶವು ಸುಮಾರು 1000 ದೈನಂದಿನ ಹೊಸ ಪ್ರಕರಣಗಳನ್ನು ವರದಿ ಮಾಡಿದೆ. ಸಾಪ್ತಾಹಿಕ ಪಾಸಿಟಿವ್ ದರವು ಶೇಕಡಾ 1ಕ್ಕಿಂತ ಕಡಿಮೆಯಾಗಿದೆ" ಎಂದಿದೆ.

ಇತ್ತೀಚೆಗೆ, ಭಾರತದ ಕೆಲವು ರಾಜ್ಯಗಳು ಹೆಚ್ಚಿನ ಪಾಸಿಟಿವ್ ಪ್ರಕರಣಗಳನ್ನು ವರದಿ ಮಾಡುತ್ತಿವೆ. ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ಇಲ್ಲಿಯವರೆಗೆ ಗಳಿಸಿದ್ದನ್ನು ಕಳೆದುಕೊಳ್ಳದೆ, ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಅಪಾಯವಾಗದಂತೆ ಮೌಲ್ಯಮಾಪನ ಆಧಾರಿತ ವಿಧಾನವನ್ನು ಅನುಸರಿಸಲು ಆರೋಗ್ಯ ಸಚಿವಾಲಯವು ಎಲ್ಲಾ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಿಗೆ ಸಲಹೆ ನೀಡಿದೆ" ಎಂದು ಮೂಲಗಳು ತಿಳಿಸಿವೆ.

### ಭೂಸೇನಾ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಮನೋಜ್ ಪಾಂಡೆ

"ಲೆಫ್ಟಿನೆಂಟ್ ಜನರಲ್ ಮನೋಜ್ ಪಾಂಡೆ ಅವರು ಮುಂದಿನ ಸೇನಾ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ ಮತ್ತು ಅವರು ಏಪ್ರಿಲ್



30 ರಂದು ನಿವೃತ್ತರಾಗುತ್ತಿರುವ ಜನರಲ್ ನರವಾಣೆ ಅವರಿಂದ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಲೆಫ್ಟಿನೆಂಟ್ ಜನರಲ್ ಪಾಂಡೆ ಅವರು COAS ಆಗಿ ನೇಮಕಗೊಂಡ ಮೊದಲ ಇಂಜಿನಿಯರ್ ಆಗಿರುತ್ತಾರೆ. ಪ್ರಸ್ತುತ ಅವರು ಸೇನೆಯ ಉಪ ಮುಖ್ಯಸ್ಥರಾಗಿದ್ದಾರೆ" ಎಂದು ಮೂಲಗಳು ತಿಳಿಸಿವೆ.

ಮನೋಜ್ ಪಾಂಡೆ ಅವರು 61ನೇ ಎನ್‌ಡಿಎ (ನ್ಯಾಷನಲ್ ಡಿಫೆನ್ಸ್ ಅಕಾಡೆಮಿ) ಬ್ಯಾಚ್‌ನ ಸೇನಾಧಿಕಾರಿ. ಭಾರತೀಯ ಸಶಸ್ತ್ರ ಪಡೆಗಳ ನಮ್ಮ ಮೂವರು ಮುಖ್ಯಸ್ಥರು ಈಗ ಅದೇ ಎನ್‌ಡಿಎ ಬ್ಯಾಚ್‌ನಿಂದ ಬಂದವರಾಗಿರುವುದು ವಿಶೇಷ. ಲೆಫ್ಟಿನೆಂಟ್ ಜನರಲ್ ಮನೋಜ್ ಪಾಂಡೆ ಲಿಮಾ ಸ್ಕ್ವಾಡ್ರನ್‌ನಿಂದ ಬಂದಿದ್ದರೆ, ಇತರ ಇಬ್ಬರು ಮುಖ್ಯಸ್ಥರು ಎನ್‌ಡಿಎಯ ಜೂಲಿಯೆಟ್ ಸ್ಕ್ವಾಡ್ರನ್‌ನಿಂದ ಬಂದವರು. ಒಂದೇ ಬ್ಯಾಚ್‌ನ ಮೂವರು ಮುಖ್ಯಸ್ಥರು ಸೇನೆ, ವಾಯುಪಡೆ ಮತ್ತು ನೌಕಾಪಡೆಯ ನಡುವಿನ ಸಮನ್ವಯ ಮತ್ತು ತಂಡವನ್ನು ಉತ್ತಮಗೊಳಿಸುತ್ತಾರೆ ಎಂದು ವಿಶ್ಲೇಷಿಸಲಾಗಿದೆ.

### ಆರೋಗ್ಯ ಕಾರ್ಯಕರ್ತರ ವಿಮಾ ಯೋಜನೆಯನ್ನು 180 ದಿನಗಳವರೆಗೆ ವಿಸ್ತರಿಸಿದ ಕೇಂದ್ರ

ಕೋವಿಡ್–19 ವಿರುದ್ಧ ಹೋರಾಡುತ್ತಿರುವ ಆರೋಗ್ಯ ಕಾರ್ಯಕರ್ತರಿಗಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ವಿಮಾ ಯೋಜನೆಯನ್ನು ಮತ್ತೆ 180 ದಿನಗಳವರೆಗೆ ವಿಸ್ತರಿಸಲಾಗಿದೆ.



"ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ (PMGKP): ಕೋವಿಡ್–19 ವಿರುದ್ಧ ಹೋರಾಡುವ ಆರೋಗ್ಯ ಕಾರ್ಯಕರ್ತರಿಗೆ ವಿಮಾ ಯೋಜನೆಯನ್ನು 19 ಏಪ್ರಿಲ್, 2022 ರಿಂದ ಮತ್ತೆ 180 ದಿನಗಳವರೆಗೆ ವಿಸ್ತರಿಸಲಾಗಿದೆ" ಎಂದು ಸರ್ಕಾರವು ಆದೇಶದಲ್ಲಿ ತಿಳಿಸಿದೆ. ಕೋವಿಡ್–19 ರೋಗಿಗಳನ್ನು ನೋಡಿಕೊಳ್ಳಲು ನಿಯೋಜಿಸಲಾದ ಆರೋಗ್ಯ ಕಾರ್ಯಕರ್ತರ ಅವಲಂಬಿತರಿಗೆ ಸುರಕ್ಷತೆ ಒದಗಿಸುವುದನ್ನು ಮುಂದುವರಿಸಲು ನೀತಿಯನ್ನು ವಿಸ್ತರಿಸಲು ನಿರ್ಧರಿಸಲಾಗಿದೆ" ಎಂದು ಆದೇಶದಲ್ಲಿ ತಿಳಿಸಲಾಗಿದೆ.

PMGKP ಯೋಜನೆಯನ್ನು ಮಾರ್ಚ್ 30, 2020 ರಂದು ಕೋವಿಡ್–19 ರೋಗಿಗಳ ನೇರ ಸಂಪರ್ಕದಲ್ಲಿದ್ದ ಮತ್ತು ಆರೈಕೆಯಲ್ಲಿದ್ದ ಸಮುದಾಯ ಆರೋಗ್ಯ ಕಾರ್ಯಕರ್ತರು ಮತ್ತು ಖಾಸಗಿ ಆರೋಗ್ಯ ಕಾರ್ಯಕರ್ತರು ಸೇರಿದಂತೆ 50 ಲಕ್ಷದಿಂದ 22.12 ಲಕ್ಷ ಆರೋಗ್ಯ ಸೇವೆ ಒದಗಿಸುವವರಿಗೆ ಸಮಗ್ರ ವೈಯಕ್ತಿಕ ಅಪಘಾತ ರಕ್ಷಣೆಯನ್ನು ಒದಗಿಸಲು ಪ್ರಾರಂಭಿಸಲಾಯಿತು.

### ಪ್ರಾಜೆಕ್ಟ್ 75ರ ಅಡಿಯಲ್ಲಿನ 6ನೇ ಜಲಾಂತರ್ಗಾಮಿ INS ವಾಗ್ಶೀರ್ ಅನಾವರಣ

ಪ್ರಾಜೆಕ್ಟ್ 75 ರ ಅಡಿಯಲ್ಲಿ ನಿರ್ಮಿಸಲಾಗುತ್ತಿರುವ ಆರು ಜಲಾಂತರ್ಗಾಮಿ ನೌಕೆಗಳಲ್ಲಿ ಕೊನೆಯದಾದ ಐಎನ್‌ಎಸ್ ವಾಗ್ಶೀರ್ ಅನ್ನು ಮಜಗಾನ್ ಡಾಕ್ ಶಿಪ್ ಬಿಲ್ಡರ್ಸ್ ಮುಂಬಯಿಯಲ್ಲಿ ಅನಾವರಣಗೊಳಿಸಿದೆ.

ಜಲಾಂತರ್ಗಾಮಿ ನೌಕೆಯನ್ನು ರಕ್ಷಣಾ ಕಾರ್ಯದರ್ಶಿ ಅಜಯ್ ಕುಮಾರ್ ಅನಾವರಣ ಮಾಡಿದರು. ಜಲಾಂತರ್ಗಾಮಿ ನೌಕೆಯು ಸಂಪೂರ್ಣ ಯುದ್ಧಕ್ಕೆ ಯೋಗ್ಯವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಒಂದು ವರ್ಷಕ್ಕೂ ಹೆಚ್ಚು ಕಾಲ ಸಮಗ್ರ ಮತ್ತು ಕಠಿಣ ಪರೀಕ್ಷೆಗಳು ಮತ್ತು ಪ್ರಯೋಗಗಳಿಗೆ ಒಳಗಾಗುತ್ತದೆ.

ನೌಕಾಪಡೆಯು ಪ್ರಾಜೆಕ್ಟ್–75 ಅಡಿಯಲ್ಲಿನ ಐಎನ್‌ಎಸ್ ಕಲ್ವರಿ, ಐಎನ್‌ಎಸ್ ಖಂಡೇರಿ ಮತ್ತು ಐಎನ್‌ಎಸ್ ಕರಂಗ್ ಅನ್ನು ಈಗಾಗಲೇ ಕಾರ್ಯಾರಂಭ ಮಾಡಲಾಗಿದೆ.5ನೇ ಐಎನ್‌ಎಸ್ ಸಮುದ್ರ ಪ್ರಯೋಗ ಆರಂಭಿಸಿದೆ.  ಇದೀಗ ಹೊಸ ಸೇರ್ಪಡೆ ಐಎನ್‌ಎಸ್ ವಾಗ್ಶೀರ್.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th APRIL 2022
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-05-2022



## ಗ್ಲೋಬಲ್ ಸೆಂಟರ್ ಫಾರ್ ಟ್ರೆಡಿಷನಲ್ ಮೆಡಿಸಿನ್–ಪ್ರಧಾನಿ ಚಾಲನೆ




ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಂದು ಗುಜರಾತ್‌ನ ಜಾಮ್ ನಗರದಲ್ಲಿ WHO ಗ್ಲೋಬಲ್ ಸೆಂಟರ್ ಫಾರ್ ಟ್ರೆಡಿಷನಲ್ ಮೆಡಿಸಿನ್? GCTMಗೆ ಶಂಕುಸ್ಥಾಪನೆ ಮಾಡಿದರು. ಈ ಸಂದರ್ಭದಲ್ಲಿ ಮಾರಿಷಸ್ ಪ್ರಧಾನಿ ಪ್ರವಿಂದ್ ಕುಮಾರ್ ಜುಗ್ನೌತ್ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ಮಹಾ ನಿರ್ದೇಶಕ ಡಾ. ಟೆಡ್ರೊಸ್ ಘೆಬ್ರೆಯೆಸಸ್ ಉಪಸ್ಥಿತರಿದ್ದರು.

ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ, ಭೂತಾನ್‌ನ ಪ್ರಧಾನಿ ಲೋಟೆ ತ್ಶೆರಿಂಗ್ ಮತ್ತು ನೇಪಾಳದ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರು ವೀಡಿಯೊ ಸಂದೇಶದ ಮೂಲಕ WHO ಗ್ಲೋಬಲ್ ಸೆಂಟರ್ ಫಾರ್ ಟ್ರೆಡಿಷನಲ್ ಮೆಡಿಸಿನ್? GCTMಗೆ ತಮ್ಮ ಶುಭಾಶಯಗಳನ್ನು ತಿಳಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಡಾ. ಟೆಡ್ರೊಸ್ ಘೆಬ್ರೆಯೆಸಸ್ ಅವರು ಈ ಬಹು ಫೆಸಿಲಿಟಿ WHO ಕೇಂದ್ರಕ್ಕಾಗಿ ಪ್ರಧಾನಿ ಮೋದಿಗೆ ಧನ್ಯವಾದ ಅರ್ಪಿಸಿದರು. ಇದು ನಿಜವಾಗಿಯೂ ಜಾಗತಿಕ ಯೋಜನೆಯಾಗಿದ್ದು, ಇದು ಪ್ರಪಂಚದ ಅನೇಕ ಜನರ ಅವಶ್ಯಕತೆ ಪೂರೈಸುತ್ತದೆ ಎಂದು ಅವರು ಹೇಳಿದರು. GCTM ಪ್ರಪಂಚದಾದ್ಯಂತ ಸಾಂಪ್ರದಾಯಿಕ ಔಷಧಕ್ಕಾಗಿ ಮೊದಲ ಮತ್ತು ಏಕೈಕ ಜಾಗತಿಕ ಹೊರ ಕೇಂದ್ರವಾಗಿದೆ. ಇದು ಜಾಗತಿಕ ಸ್ವಾಸ್ಥ್ಯದ ಅಂತಾರಾಷ್ಟ್ರೀಯ ಕೇಂದ್ರವಾಗಿ ಹೊರಹೊಮ್ಮಲಿದೆ.

## ಕಳೆದ ವಿತ್ತ ವರ್ಷದಲ್ಲಿ 65% ಜಿಗಿತ ಕಂಡ ಭಾರತದ ಸಕ್ಕರೆ ರಫ್ತು

ಭಾರತದ ಸಕ್ಕರೆ ರಫ್ತು 2013–14ರ ಹಣಕಾಸು ವರ್ಷದಲ್ಲಿ ಇದ್ದ 1,177 ಮಿಲಿಯನ್ ಯುಎಸ್ ಡಾಲರ್‌ಗಳಿಂದ ಕಳೆದ ಹಣಕಾಸು ವರ್ಷದಲ್ಲಿ 4,600 ಮಿಲಿಯನ್ ಯುಎಸ್ ಡಾಲರ್‌ಗಳಿಗೆ ಶೇಕಡಾ



291 ರಷ್ಟು ಅಭೂತಪೂರ್ವ ಬೆಳವಣಿಗೆಯನ್ನು ಕಂಡಿದೆ ಎಂದು ಮೂಲಗಳು ತಿಳಿಸಿವೆ.

ಇದೇ ಮೊದಲ ಬಾರಿಗೆ ಭಾರತದ ಸಕ್ಕರೆ ರಫ್ತು 10 ಮಿಲಿಯನ್ ಟನ್‌ಗಳನ್ನು ಮೀರಿದೆ. ಕೋವಿಡ್–19 ಸಾಂಕ್ರಾಮಿಕದಿಂದ ಉಂಟಾದ ಲಾಜಿಸ್ಟಿಕಲ್ ಸವಾಲುಗಳ ಹೊರತಾಗಿಯೂ, ಸಕ್ಕರೆ ರಫ್ತು ಕಳೆದ ಹಣಕಾಸು ವರ್ಷದಲ್ಲಿ ಅದರ ಹಿಂದಿನ ವರ್ಷಕ್ಕಿಂತ 65 ಪ್ರತಿಶತದಷ್ಟು ಜಿಗಿದಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಈ ಐತಿಹಾಸಿಕ ಸಾಧನೆಯನ್ನು ಟ್ವೀಟ್‌ನಲ್ಲಿ ತಿಳಿಸಿರುವ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಸರ್ಕಾರದ ನೀತಿಗಳು ಜಾಗತಿಕ ಮಾರುಕಟ್ಟೆಗಳನ್ನು ಸೆಳೆಯುವ ಮೂಲಕ ತಮ್ಮ ಆದಾಯವನ್ನು ಹೆಚ್ಚಿಸಲು ರೈತರಿಗೆ ಸಹಾಯ ಮಾಡುತ್ತಿವೆ ಎಂದಿದ್ದಾರೆ. 2019–20ರಲ್ಲಿ ದೇಶವು 1,965 ಮಿಲಿಯನ್ ಯುಎಸ್ ಡಾಲರ್ ಮೌಲ್ಯದ ಸಕ್ಕರೆಯನ್ನು ರಫ್ತು ಮಾಡಿದೆ, ಇದು 2020–21ರಲ್ಲಿ 2,790 ಮಿಲಿಯನ್ ಯುಎಸ್ ಡಾಲರ್‌ಗಳಿಗೆ ಮತ್ತು 2021–22ರಲ್ಲಿ 4,600 ಮಿಲಿಯನ್ ಯುಎಸ್ ಡಾಲರ್‌ಗಳಿಗೆ ಏರಿದೆ ಎಂದು ಸಚಿವಾಲಯ ತಿಳಿಸಿದೆ.

## 2024ರ ವೇಳೆಗೆ ಭಾರತದ ರಸ್ತೆ ಮೂಲಸೌಕರ್ಯ ಅಮೇರಿಕಕ್ಕೆ ಸಮನಾಗಿರುತ್ತದೆ: ನಿತಿನ್ ಗಡ್ಕರಿ




2024ರ ಅಂತ್ಯದ ವೇಳೆಗೆ ಭಾರತದ ರಸ್ತೆ ಮೂಲಸೌಕರ್ಯವು ಅಮೆರಿಕದ ಮೂಲಸೌಕರ್ಯಕ್ಕೆ ಸಮನಾಗಿರುತ್ತದೆ. ತಮ್ಮ ಸಚಿವಾಲಯವು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಹೇಳಿದ್ದಾರೆ.

ನವದೆಹಲಿಯಲ್ಲಿ ASSOCHAM ಆಯೋಜಿಸಿದ್ದ ಮೂಲಸೌಕರ್ಯ ಹೂಡಿಕೆಗಳ ಮೂಲಕ ಭಾರತದ ಸಾಮಾಜಿಕ–ಆರ್ಥಿಕ ದೃಷ್ಟಿಯ ಅರಿತುಕೊಳ್ಳುವಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ಕೆಲಸವು ಹೆಚ್ಚು ಉತ್ಪಾದಕವಾಗಿದೆ. ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲು ಒತ್ತು ನೀಡಿರುವುದಾಗಿ ಹೇಳಿದ ಗಡ್ಕರಿ, ದೇಶದ ಗಮನವು ಮೇಕ್ ಇನ್ ಇಂಡಿಯಾ ಮತ್ತು ಮೇಡ್ ಬೈ ಇಂಡಿಯಾ ಮೇಲೆ ಕೇಂದ್ರೀಕರಿಸಿದೆ ಎಂದು ಹೇಳಿದರು.

ಅಲ್ಲದೆ ರಫ್ತು ಅನುಪಾತ ಹೆಚ್ಚಾಗಿ ಆಮದು ಕಡಿಮೆಯಾದಾಗ ಸ್ವಾವಲಂಬಿ ಭಾರತ ಸಾಧ್ಯ ಎಂದರು. ನಿರ್ಮಾಣ ಕೈಗಾರಿಕೋದ್ಯಮಿಯೊಂದಿಗೆ ಸಂವಾದ ನಡೆಸಿದ ಗಡ್ಕರಿ ಅವರು, ಗುಣಮಟ್ಟದೊಂದಿಗೆ ರಾಜಿ ಮಾಡಿಕೊಳ್ಳದೆ ನಿರ್ಮಾಣ ವೆಚ್ಚವನ್ನು ಕಡಿಮೆ ಮಾಡಲು ಅವರು ಇತರ ಆಯ್ಕೆಗಳನ್ನು ಕಂಡುಹಿಡಿಯಬೇಕು ಎಂದು ಹೇಳಿದರು. ಆವಿಷ್ಕಾರ ಮತ್ತು ತಂತ್ರಜ್ಞಾನದ ಬಳಕೆಯಿಂದ ವೆಚ್ಚ ಕಡಿತ ಸಾಧ್ಯ ಎಂದರು. ನಾವೀನ್ಯತೆಯತ್ತ ಗಮನ ಹರಿಸುವಂತೆ ಸಚಿವರು ಒತ್ತಾಯಿಸಿದರು. ಕೈಗಾರಿಕೆಗೆ ಸರ್ಕಾರ ಎಲ್ಲ ರೀತಿಯ ನೆರವು ನೀಡಲಿದೆ ಎಂದರು.

## ಸ್ಮಾರ್ಟ್ ಸಿಟಿಯಾಗಿ ಅಯೋಧ್ಯಾ!



**ಲಕ್ನೋ:** ಪುರಾತನ ಪವಿತ್ರ ನಗರ ಮತ್ತು ಭಗವಾನ್ ರಾಮನ ಜನ್ಮಸ್ಥಳವಾದ ಅಯೋಧ್ಯೆಯನ್ನು ನವೀಕರಿಸಬಹುದಾದ ಇಂಧನದ ಮೇಲೆ ಕೇಂದ್ರೀಕರಿಸುವ 'ಹವಾಮಾನ–ಸ್ಮಾರ್ಟ್ ಸಿಟಿ'ಯಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ.

ನಗರಾಭಿವೃದ್ಧಿ ಇಲಾಖೆಯು ಕೆಲವೇ ವಾರಗಳಲ್ಲಿ ವೈದಿಕ ಥೀಮ್ ಆಧಾರಿತ ಗ್ರೀನ್‌ಫೀಲ್ಡ್ ಟೌನ್‌ಶಿಪ್‌ನ ಕೆಲಸವನ್ನು ಪ್ರಾರಂಭಿಸಲು ಸಿದ್ಧವಾಗಿದೆ ಎಂದು ವರದಿ ಹೇಳಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಸಚಿವರ ಗುಂಪಿನ ಮುಂದೆ ಇಲಾಖೆಯು ತಕ್ಷಣದ, ಅಲ್ಪಾವಧಿ ಮತ್ತು ದೀರ್ಘಾವಧಿಯ ಕ್ರಿಯಾ ಯೋಜನೆಗಳ ಪ್ರಸ್ತುತಿಯನ್ನು ನೀಡಿದೆ. ಸರ್ಕಾರದ ವಕ್ತಾರರ ಪ್ರಕಾರ, ಸುಸ್ಥಿರ ಟೌನ್‌ಶಿಪ್‌ನಲ್ಲಿ ಉಳಿಯಲು ಎದುರು ನೋಡುತ್ತಿರುವ ಜನರ ಬೇಡಿಕೆಯನ್ನು ಪೂರೈಸಲು ವೈದಿಕ ವಿಷಯದ ಆಧಾರದ ಮೇಲೆ 1200 ಎಕರೆ ವಿಶಾಲ ಗ್ರೀನ್‌ಫೀಲ್ಡ್ ಟೌನ್‌ಶಿಪ್ ಅನ್ನು ಪ್ರಸ್ತಾಪಿಸಲಾಗಿದೆ. ಈ ನಿಟ್ಟಿನಲ್ಲಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆ. ರಾಮಮಂದಿರ ನಿರ್ಮಾಣವಾದ ಬಳಿಕ ಪ್ರವಾಸಿಗರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಲಿದೆ ಎಂದು ರಾಜ್ಯ ಸರ್ಕಾರ ನಿರೀಕ್ಷಿಸುತ್ತಿದೆ.

ರಾಮಮಂದಿರ ನಿರ್ಮಾಣಕ್ಕೂ ಮುನ್ನವೇ ಸಿದ್ಧವಾಗುವಂತೆ ಪವಿತ್ರ ನಗರದ ಅಭಿವೃದ್ಧಿಗೆ ವೇಗ ನೀಡುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ನಗರಾಭಿವೃದ್ಧಿ ಸಚಿವ ಎ.ಕೆ. ಶರ್ಮಾ ಅವರು ಅಯೋಧ್ಯೆಯ ಟೌನ್‌ಶಿಪ್ ನವೀಕರಿಸಬಹುದಾದ ಇಂಧನವನ್ನು ಆಧರಿಸಿದೆ ಮತ್ತು ಅದನ್ನು 'ಹವಾಮಾನ–ಸ್ಮಾರ್ಟ್ ಸಿಟಿ' ಆಗಿ ಪರಿವರ್ತಿಸಲಾಗುತ್ತಿದೆ ಎಂದು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ಇದಲ್ಲದೆ, ನಗರಾಭಿವೃದ್ಧಿ ಇಲಾಖೆಯು ಲಕ್ನೋದಲ್ಲಿನ ಕುಕ್ರೈಲ್ ಮೀಸಲು ಅರಣ್ಯವನ್ನು ನವೀಕರಿಸಲು ಮತ್ತು ಪ್ರವಾಸಿಗರಿಗೆ ಹೆಚ್ಚು ಆಕರ್ಷಣೀಯವಾಗಿಸಲು ಯೋಜಿಸುತ್ತಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.